# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2232 (2614) |
| ಸದಸ್ಯರ ಹೆಸರು | : | ಡಾ॥ ಚಂದ್ರಶೇಖರ್ ಬಿ.ಪಾಟೀಲ್, (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 24.03.2022 |
| ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಹೆಬ್ಬಾಳ ಫ್ಲೈ ಓವರ್ (ಮೇಲುಸೇತುವೆ) ದಿಂದ ಜಕ್ಕೂರು ಏರೋಡ್ರಮ್, ಜಕ್ಕೂರು ಮೇಲ್‌ಸೇತುವೆ ಮೇಲೆ ಮರಳು ಲಾರಿ, ಟ್ರ್ಯಾಕ್ಟರ್‌ಗಳು, ಎಂ ಸ್ಯಾಂಡ್ ಲಾರಿ, ಟೆನ್ ವ್ಹೀಲ್ ಲಾರಿಗಳು, ಜಲ್ಲಿ ತುಂಬಿರುವ ಲಾರಿಗಳ ಓಡಾಟದಿಂದಾಗಿ ಮೇಲು ಸೇತುವೆಗೆ ಧಕ್ಕೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; | ಬಂದಿರುವುದಿಲ್ಲ. |
| ಆ) | ಬಂದಿದ್ದಲ್ಲಿ, ಈ ತರಹದ ಭಾರಿ ವಾಹನಗಳ ಓಡಾಟಕ್ಕೆ ಕಡಿವಾಣ ಹಾಕಲು ಸಂಚಾರ ಪೊಲೀಸ್ ಇಲಾಖೆಯು ಯಾವ ಕ್ರಮ ಕೈಗೊಂಡಿದೆ ; (ವಿವರ ಒದಗಿಸುವುದು) | ಯಾವುದೇ ದೂರುಗಳು ಬಂದಿರುವುದಿಲ್ಲ. ಆದ್ದರಿಂದ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ |
| ಇ) | ಹೆಬ್ಬಾಳ ಫ್ಲೈ ಓವರ್ ಕೆಳಗಡೆ ಅಕ್ರಮ ಚಟುವಟಿಕೆಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಸದರಿ ಸ್ಥಳದಲ್ಲಿ ಪೊಲೀಸ್ ಸಿಬ್ಬಂದಿಗಳು ಇದ್ದರೂ ಕೂಡ, ಅಕ್ರಮ, ಅನೈತಿಕ ಚಟುವಟಿಕೆಗಳು ರಾಜಾರೋಷವಾಗಿ ನಡೆಯುತ್ತಿದ್ದರೂ ಪೊಲೀಸ್ ಇಲಾಖೆಯವರು ಯಾವುದೇ ರೀತಿಯ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳದಿರಲು ಕಾರಣವೇನು ; | ಬೆಂಗಳೂರು ನಗರದ ಹೆಬ್ಬಾಳ ಫ್ಲೈ ಓವರ್ ಸ್ಥಳವು ರಿಂಗ್ ರಸ್ತೆಯನ್ನು ಹೊಂದಿದ್ದು, ಸದರಿ ಸ್ಥಳವು ಸಂಜಯನಗರ ಪೊಲೀಸ್ ಠಾಣೆ, ಕೊಡಿಗೇಹಳ್ಳಿ ಮತ್ತು ಅಮೃತಹಳ್ಳಿ ಪೊಲೀಸ್, ಠಾಣಾ ವ್ಯಾಪ್ತಿಯ ಸರಹದ್ದಿಗೆ ಒಳಪಡುತ್ತದೆ. ಸದರಿ ವ್ಯಾಪ್ತಿಗೆ ಒಳಪಡುವ ಹೆಬ್ಬಾಳ ಫ್ಲೈ ಓವರ್ ಸ್ಥಳದಲ್ಲಿ ಪ್ರತಿ ದಿನ ಬೀಟ್ ಕರ್ತವ್ಯಕ್ಕೆ ಸಿಬ್ಬಂದಿಯವರನ್ನು ನೇಮಿಸಲಾಗಿರುತ್ತದೆ ಹಾಗೂ ಪ್ರತಿ ದಿನ ಪೊಲೀಸ್ ಪಿಕೆಟಿಂಗ್ ಪಾಯಿಂಟ್ ಅನ್ನು ಸಹ ನಿಯೋಜಿಸಲಾಗುತ್ತಿರುತ್ತದೆ. ಹಗಲು ಮತ್ತು ರಾತ್ರಿ ಪಾಳಿಯಲ್ಲಿ ಕ್ರಮವಾಗಿ ಹೊಯ್ಸಳ ಹಾಗೂ ಚೀತಾ ವಾಹನಗಳು ಗಸ್ತು ಕರ್ತವ್ಯಕ್ಕೆ ನಿಯೋಜಿಸಿರುತ್ತದೆ. ಪಿ.ಐ. & ಪಿ.ಎಸ್.ಐ ರವರುಗಳು ಸಹ ಪ್ರತಿ ದಿನ ಗಸ್ತು ಸಮಯದಲ್ಲಿ ಹೆಬ್ಬಾಳ ಫ್ಲೈ ಓವರ್ ಕಡೆಗಳಲ್ಲಿ ಗಸ್ತು ಕರ್ತವ್ಯವನ್ನು ನಿರ್ವಹಿಸುತ್ತಿದ್ದು, ಯಾವುದೇ ಅಕ್ರಮ ಚಟುವಟಿಕೆಗಳು ನಡೆಯದಂತೆ ಕ್ರಮ ಕೈಗೊಳ್ಳಲಾಗಿದೆ.<br><br>ದಿನದ 24 ಗಂಟೆಯೂ ಹೊಯ್ಸಳ ಮತ್ತು ಚೀತಾ ಸಿಬ್ಬಂದಿಯವರಿಗೆ ಆ ಪ್ರದೇಶದಲ್ಲಿ ಗಸ್ತು ಮಾಡಿ ಮಂಗಳಮುಖಿಯರನ್ನು ಹಾಗೂ ಅವರ ವರ್ತನೆಯನ್ನು |

| | | |
|---|---|---|
| | | ತಡೆಗಟ್ಟಲು ಕ್ರಮ ಕೈಗೊಳ್ಳಲಾಗಿದೆ. ಮಂಗಳ ಮುಖಿಯರ ತೊಂದರೆಯನ್ನು ತಡೆಗಟ್ಟಲು ವಿಭಾಗ ಮಟ್ಟದ ವ್ಯಾಪ್ತಿಯಲ್ಲಿ "ಸಾರ್ವಜನಿಕ ಸುರಕ್ಷಾ ದಳ" ವನ್ನು ರಚಿಸಲಾಗಿದ್ದು, ಇದರ ಮುಖ್ಯಸ್ಥರನ್ನಾಗಿ ಮಹಿಳಾ ಪಿ.ಎಸ್.ಐ ರವರನ್ನು ನೇಮಿಸಲಾಗಿದೆ.<br>ಸದರಿ ಪ್ರದೇಶವು ಮಿನಿ ಅರಣ್ಯ ಪ್ರದೇಶವನ್ನು ಒಳಗೊಂಡಿದ್ದು, ಅಲ್ಲಿ ಬಿ.ಬಿ.ಎಂ.ಪಿ. ರವರೊಂದಿಗೆ ಚರ್ಚಿಸಿ ಸದರಿ ಸ್ಥಳದಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಮಾಸ್ಕ್ ಲೈಟ್, ಸಿ.ಸಿ. ಟಿವಿ ಕ್ಯಾಮೆರಾ ಅಳವಡಿಸಲು ಮತ್ತು ಸುರಕ್ಷಾ ಬೇಲಿಯನ್ನು ಅಳವಡಿಸಲು ಕೋರಲಾಗಿದೆ. ಸಾರ್ವಜನಿಕರಿಗೆ ತೊಂದರೆಯನ್ನು ತಡೆಗಟ್ಟಲು ಫ್ಲೈ ಓವರ್ ಕೆಳಗೆ ಪೊಲೀಸ್ ಚೌಕಿಯನ್ನು ನಿರ್ಮಾಣ ಮಾಡಲು ಕೋರಲಾಗಿದೆ. ಸಾರ್ವಜನಿಕರಿಗೆ ಜಾಗೃತಿ ಮೂಡಿಸಲು ಹೊಯ್ಸಳ ವಾಹನ ಹಾಗೂ ಪೊಲೀಸ್ ಜೀಪ್‌ನಲ್ಲಿ ಪ್ರಚಾರದ ಮೂಲಕ ಸೂಕ್ತ ಸೂಚನೆಗಳನ್ನು ನೀಡಿ ಅಗತ್ಯ ಮಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>ಸದರಿ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ತೊಂದರೆಯಾಗಿರುವ ಬಗ್ಗೆ ಯಾವುದೇ ದೂರುಗಳು ಬಂದಿರುವುದಿಲ್ಲ. ದೂರುಗಳು ಬಂದಲ್ಲಿ ಅಗತ್ಯ ಕಾನೂನು ರೀತ್ಯಾ ಕ್ರಮವನ್ನು ಜರುಗಿಸಲಾಗುವುದು. |
| ಈ) | ವೀಕೆಂಡ್, ರಜಾ ದಿನಗಳಲ್ಲಿ ವೀಲಿಂಗ್ ನಡೆಯುತ್ತಿದ್ದು, ಇದನ್ನು ಸರ್ಕಾರ ಗಮನಿಸಿದೆಯೇ ; ಗಮನಿಸಿದ್ದಲ್ಲಿ, ಯಾವ ಕ್ರಮ ಕೈಗೊಂಡಿದೆ ? | **ಗಮನಿಸಲಾಗಿದೆ.**<br>ವ್ಹೀಲಿಂಗ್ ಮತ್ತು ಡ್ರಾಗ್ ರೇಸ್ ನಡೆಸುವವರ ವಿರುದ್ಧ ಕೈಗೊಂಡಿರುವ ಕ್ರಮದ ವಿವರಗಳನ್ನು **<u>ಅನುಬಂಧ-1</u>**ರಲ್ಲಿ ಲಗತ್ತಿಸಲಾಗಿದೆ. |

ಹೆಚ್‌ಡಿ 150 ಎಸ್‌ಎಸ್‌ಟಿ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು

**ಅನುಬಂಧ-1**

**ವ್ಹೀಲಿಂಗ್ ಮತ್ತು ಡ್ರ್ಯಾಗ್ ರೇಸ್ ನಡೆಸುವವರ ವಿರುದ್ಧ ಕೈಗೊಂಡಿರುವ ಕ್ರಮಗ ವಿವರಗಳು :**

1. ನಗರದಲ್ಲಿ ಕಾನೂನು ರೀತಿಯಲ್ಲಿ ವೀಲಿಂಗ್ ಮತ್ತು ಡ್ರಾಗ್ ರೇಸಿಂಗ್‌ಗೆ ಸಾಕಷ್ಟು ಕಡಿವಾಣ ಹಾಕಲಾಗಿದೆ.
2. ಡ್ರ್ಯಾಗ್ ರೇಸ್ ಮಾಡುವವರ ವಿರುದ್ಧ ಕಲಂ 189 ಐ.ಎಂ.ವಿ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿ ವಾಹನವನ್ನು ಮತ್ತು ಚಾಲನಾ ಪರವಾನಿಗೆಯನ್ನು ವಶಪಡಿಸಿಕೊಂಡು ಪರವಾನಿಗೆಯನ್ನು ಅಮಾನತ್ತಿಗಾಗಿ ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಕಛೇರಿಗೆ ಕಳುಹಿಸಿಕೊಡಲಾಗುತ್ತಿದೆ.
3. ಸಾರ್ವಜನಿಕರ ಸುರಕ್ಷತೆ ದೃಷ್ಟಿಯಿಂದ ಈ ಹಾವಳಿಯನ್ನು ತಪ್ಪಿಸಲು ವೀಲಿಂಗ್ ಮತ್ತು ಡ್ರಾಗ್ ರೇಸ್‌ನಲ್ಲಿ ತೊಡಗಿಸಿಕೊಂಡವರ ವಿರುದ್ಧ ಅಜಾಗರೂಕತೆ ಹಾಗೂ ನಿರ್ಲಕ್ಷ ಚಾಲನೆಯಡಿ ಐಪಿಸಿ ಸೆಕ್ಷನ್ 279 ರಡಿಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.
4. ಪೋಷಕರನ್ನು ಕರೆಯಿಸಿ ಮಕ್ಕಳಿಗೆ ಈ ರೀತಿಯ ದುಸ್ಸಾಹಸ ಮಾಡಿ ಅನಾಹುತ ಉಂಟು ಮಾಡದಂತೆ ಸೂಕ್ತ ಬುದ್ದಿವಾದ ಹೇಳಲಾಗುತ್ತಿದೆ.
5. ಸಾರ್ವಜನಿಕರ ಸುರಕ್ಷತೆ ದೃಷ್ಟಿಯಿಂದ ಈ ಹಾವಳಿಯನ್ನು ತಪ್ಪಿಸಲು ವೀಲಿಂಗ್ ಮತ್ತು ಡ್ರಾಗ್ ರೇಸ್‌ನಲ್ಲಿ ತೊಡಗಿಸಿಕೊಂಡವರ ವಿರುದ್ಧ ಅಜಾಗರೂಕತೆ ಹಾಗೂ ನಿರ್ಲಕ್ಷ ಚಾಲನೆಯಡಿ ಐ.ಪಿ.ಸಿ. ಮತ್ತು ಐ.ಎಂ.ವಿ. ಕಾಯ್ದೆ ಅಡಿಯಲ್ಲಿ ವಿಶೇಷ ಕಾರ್ಯಾಚರಣೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. 2020, 2021 ಹಾಗೂ 2022ನೇ ಸಾಲಿನಲ್ಲಿ ವೀಲಿಂಗ್ ಮತ್ತು ಡ್ರಾಗ್ ರೇಸ್ ನಡೆಸುವವರ ವಿರುದ್ಧ ಈ ಕೆಳಕಂಡಂತೆ ಪ್ರಕರಣಗಳನ್ನು ದಾಖಲು ಮಾಡಲಾಗಿರುತ್ತದೆ.

| ವರ್ಷ | ದಾಖಲಿಸಿದ ಪ್ರಕರಣಗಳು | | ಒಟ್ಟು |
|---|---|---|---|
| | ಐ.ಪಿ.ಸಿ ಅಡಿಯಲ್ಲಿ | ಐ.ಎಂ.ವಿ. ಕಾಯ್ದೆ ಅಡಿಯಲ್ಲಿ | |
| 2020 | 343 | 11 | 354 |
| 2021 | 231 | 25 | 256 |
| 2022 (15.03.2022ರ ಅಂತ್ಯಕ್ಕೆ) | 83 | 02 | 85 |

6. ಡ್ರ್ಯಾಗ್ ರೇಸ್ ಮತ್ತು ವ್ಹೀಲಿಂಗ್ ಮಾಡುವವರ ವಿರುದ್ಧ ಕಲಂ 107 ಸಿ.ಆರ್.ಪಿ.ಸಿ ರೀತ್ಯವು ಕ್ರಮ ಕೈಗೊಳ್ಳಲಾಗುತ್ತಿದೆ. 2020, 2021 ಹಾಗೂ 2022ನೇ ಸಾಲಿನಲ್ಲಿ ಈ ಕೆಳಕಂಡಂತೆ ಪ್ರಕರಣಗಳನ್ನು ದಾಖಲಿಸಲಾಗಿದೆ.

| ವರ್ಷ | ಕಲಂ 107 ಸಿ.ಆರ್.ಪಿ.ಸಿ ಅಡಿಯಲ್ಲಿ ದಾಖಲಿಸಿದ ಪ್ರಕರಣಗಳು |
|---|---|
| 2020 | 56 |
| 2021 | 68 |
| 2022 (15.03.2022ರ ಅಂತ್ಯಕ್ಕೆ) | 12 |

ಮುಂದಿನ ದಿನಗಳಲ್ಲಿಯೂ ಸಹ ವ್ಹೀಲಿಂಗ್ ಮಾಡುವವರ ವಿರುದ್ಧ ನಿಯಮಾನುಸಾರ ಅಗತ್ಯ ಕ್ರಮಕೈಗೊಳ್ಳಲು ಕಾರ್ಯಾಚರಣೆಯನ್ನು ಮುಂದುವರಿಸಿದೆ.

***